ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
ನೈಂಟಿಗೂ, ನೈಟಿಗೂ ಏನು ವ್ಯತ್ಯಾಸ?



ನೈಟಿ ಮಾನ ಮುಚ್ಚುತ್ತದೆ, ನೈಂಟಿ ಮಾನ ಹರಾಜು ಹಾಕುತ್ತದೆ.

ಜೆ.ಪ್ರದೀಪಕುಮಾರ, ಹೂವಿನಹಡಗಲಿ
ಅಮೆರಿಕನ್ನರು ಏಕೆ ಶ್ವಾನಪ್ರಿಯರು?
ಅವರನ್ನು ನಿಷ್ಠೆಯಿಂದ ಹಿಂಬಾಲಿಸುವುದು ಅದೊಂದೇ ಆದ್ದರಿಂದಂತೆ!

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ
ವಿಮಾನದಿಂದ ಜಿಗಿದರೆ ಪ್ಯಾರಾಷೂಟ್ ಬೇಕು, ರಾಜಕೀಯ ಪಕ್ಷದಿಂದ ಜಿಗಿದರೆ?



ಭಾರೀ ಸೂಟ್‌ಕೇಸು!

ಬಾ.ರಂ.ಸುರೇಶ್, ಶಿವಮೊಗ್ಗ
ನನ್ನವಳು ಮಾತುಮಾತಿಗೂ ಕಾಲೆಳೆದು ಜಗಳವಾಡುವವಳಲ್ಲಾ, ಪರಿಹಾರ ಹೇಗೆ?
ಬಹಳ ಸುಲಭ. ಕಾಲು ಕೈಗೆ ಸಿಗದ ಹಾಗೆ ದೂರ ನಿಂತರಾಯ್ತು!

ಎಸ್. ಲಕ್ಷ್ಮೀನಾರಾಯಣ, ಚಾಮರಾಜನಗರ
ನಿಮ್ಮನ್ನು ಮುಖ್ಯಮಂತ್ರಿ ಮಾಡಬೇಕೆಂದುಕೊಂಡಿದ್ದೇವೆ, ಒಪ್ಪುವಿರಾ?
ಬೇಡ, ನನಗೆ ಪಬ್ಲಿಕ್‌ನಲ್ಲಿ ಅಷ್ಟು ಚೆನ್ನಾಗಿ ಅಳಲು ಬರುವುದಿಲ್ಲ!

ರಮೇಶ ವಿರೂಪಾಕ್ಷಪ್ಪ, ಕಾಮನೂರು
ಎಮ್ಮೆಗೂ, ಎಮ್ಮೆಲ್ಲೆಗೂ ಏನು ವ್ಯತ್ಯಾಸ?
ಎಮ್ಮೆಯಿಂದ ಹಾಲು, ಎಮ್ಮೆಲ್ಲೆಯಿಂದ ಹಾಳು!

ಅಮರಯ್ಯ ಪತ್ರಿಮಠ, ಸುರಪೂರ
ನೀವು ಆಸ್ತಿಕರೋ, ನಾಸ್ತಿಕರೋ?
ದೇವರಾಣೆಗೂ ನಾಸ್ತಿಕ!

ನಾಗರಾಜ ರಾಮಚಂದ್ರ ಹೆಗಡೆ, ಕಡ್ಲೆ
ಚಿಂತೆಯ ನಂತರ ಚಿತೆಯೋ?
ಸತ್ತವನ ಸಾಲ ಇರುವವರ ಮೇಲೆ ಬಿದ್ದರೆ, ಚಿತೆಯ ನಂತರವೇ ಚಿಂತೆ!

ಎಸ್.ಜಿ.ರಾಜಶೇಖರರೆಡ್ಡಿ, ಗೌರಿಬಿದನೂರು
ತಿರುಪತಿ ತಿಮ್ಮಪ್ಪನನ್ನು ನಮ್ಮ ಮನೆಗೆ ಎತ್ತಿ ಹಾಕಿಕೊಂಡು ಬರಬೇಕೆಂದಿದ್ದೇನೆ. ನಿಮ್ಮ ಸಲಹೆ?
ಮಹಾನ್ ಸಾಲಗಾರ ಅವನು. ಕುಬೇರ ಬಂದು ನಿಮ್ಮ ಮನೆಯನ್ನೂ ಜಪ್ತಿ ಮಾಡಿಬಿಟ್ಟಾನು, ಜೋಕೆ!

ಟಿ.ಆರ್.ದಾಶರಥಿ, ನಾಗರಬಾವಿ
ಸಗಣಿ-ಗಣಿ ಇವೆರಡರ ವ್ಯತ್ಯಾಸವೇನು?
ಸಗಣಿಯಿಂದ ಬಲೀಂದ್ರನ ಕೋಟೆ, ಗಣಿಯಿಂದ ಬಲಿಷ್ಠರ ಕೋಟೆ!

ಭಾನುಪ್ರಕಾಶ್, ಬೆಂಗಳೂರು
ಸದನಕಲಾಪ ನಡೆಯುವಾಗ ಶಾಸಕರ ಭತ್ಯೆ ಕೊಡುವುದು ಅವರು ನಿದ್ರೆ ಮಾಡಲಿಕ್ಕೋ?
ಇಲ್ಲ, ಅವರು ಆ ಕೆಲಸವನ್ನು ಬಿಟ್ಟಿಯಾಗಿ ಮಾಡುತ್ತಾರೆ.

ನಖಾತೆ ಆನಂದರಾವ್, ನಂದಿದುರ್ಗ ರಸ್ತೆ
'Life begins at 60' ಎನ್ನುತ್ತಾರೆ. ಹಾಗಾದರೆ ಅಲ್ಲಿಯವರೆಗೆ ಕಳೆದುದು?
ಅದು ವಯಸ್ಸಿನ ಲೆಕ್ಕದ 60 ಅಲ್ಲ, ಬಾಟಲಿನ ಲೆಕ್ಕದ 60 ಎಂದನೊಬ್ಬ ಡ್ರಿಂಕಿಗ.

ಮಹೇಶ್ ಹೆಗ್ಡೆ, ಹೆಗ್ಲೆ
ಒಂದು ವರ್ಷದಲ್ಲಿ ಹುಡುಗಿಯರು ಎಷ್ಟು ಸಲ ಹುಡುಗರನ್ನು, ಸಿಮ್ ಕಾರ್ಡನ್ನು ಬದಲಾಯಿಸುತ್ತಾರೆ ತಿಳಿಸಿ ನೋಡೋಣ?
ಕಡಿಮೆಯೆಂದರೆ ಹೊಸ ಉಡುಪು ಖರೀದಿಸಿದಷ್ಟು ಬಾರಿ, ಹೆಚ್ಚೆಂದರೆ ಐಸ್‌ಕ್ರೀಮ್ ತಿಂದಷ್ಟು ಬಾರಿ.

## ಬಹುಮಾನಿತ ಪ್ರಶ್ನೆ

ಹೆಚ್.ಎಂ.ಡಿ.ಸರ್ದಾರ್, ಕೂಡ್ಲಿಗಿ
ಪತ್ರಕರ್ತನಿಗೂ, ಸೃಷ್ಟಿಕರ್ತನಿಗೂ ಇರುವ ವ್ಯತ್ಯಾಸವೇನು?
ಸೃಷ್ಟಿಕರ್ತನದು ಎಲ್ಲಾ ಒರಿಜಿನಲ್, ಪತ್ರಕರ್ತ ನಕಲಿಯನ್ನೂ ಸೃಷ್ಟಿಸಬಲ್ಲ!

ಎಸ್. ನರೇಂದ್ರ ನಾಯಕ್, ಗಂಗೊಳ್ಳಿ
ಲಂಚವನ್ನು ಸಕ್ರಮಗೊಳಿಸಿದರೆ?
ಸಂಬಳ ಪಡೆದವರ ಮೇಲೆ ಲೋಕಾಯುಕ್ತರ ರೈಡ್ ಅಂತೆ!

ಎ.ಎಸ್. ಸ್ವಾಮಿ, ಶೋರಾಪೂರ
ಕೌಟುಂಬಿಕ ಕಲಹಗಳಿಗೆ ಮುಕ್ತಿ ಹೇಗೆ?
ಲಾಯರ್ ಫೀಸ್ ಕೊಡಲು ಶಕ್ತಿ ಇಲ್ಲದಾಗ ಕಲಹಗಳಿಗೆ ಆಟೋಮ್ಯಾಟಿಕ್ ಮುಕ್ತಿ!

ಹಾಡ್ಯ ಜಯಾನಂದ, ಮೈಸೂರು
ಮಾನ, ಮರ್ಯಾದೆ ಇಲ್ವಾ ಅಂತ ಬೈತಾರೆ. ಇವು ಎಲ್ಲಿ ಸಿಗುತ್ತವೆ?
ಎಲ್ಲಿಯಾದರೂ ಸಿಕ್ಕೀತು, ಪಾರ್ಲಿಮೆಂಟ್, ವಿಧಾನಸೌಧ ಇವೆರಡು ಜಾಗದಲ್ಲಿ ಮಾತ್ರ ಹುಡುಕುವುದು ವ್ಯರ್ಥ!

ಶಿರಾಲಿ ದೀಪಕ್ ಆರ್. ಶೇಟ್, ತ್ಯಾಗರಾಜನಗರ
ಜೈಲಿನಲ್ಲಿರುವ ಖೈದಿಗಳಿಗೂ ಬಿಳಿ ಸಮವಸ್ತ್ರ, ರಾಜಕಾರಣಿಗಳಿಗೂ ಬಿಳಿ ಸಮವಸ್ತ್ರ; ಏಕೆ?
ಸರಿಯೇ. ಜೈಲು ಕಳ್ಳನನ್ನು ರಾಜಕಾರಣಿಯಾಗಿಸುವ ಸ್ಕೂಲು. ಸ್ಕೂಲು ಬಿಟ್ಟರೂ ಬಣ್ಣ ಬದಲಿಸದಿರುವುದರಿಂದ ಅದೇ ವಸ್ತ್ರವಷ್ಟೆ!

ಎಂ.ಎನ್.ಸೋಮಶೇಖರ್, ಮೈಸೂರು
ಹುಟ್ಟು ಸಾವುಗಳು ಏಕೆ ಬೇಕಿತ್ತು?
ವೈದ್ಯ, ದಾದಿ, ಪುರೋಹಿತರು, ಗ್ರೀಟಿಂಗ್ ಅಂಗಡಿಗಳು ಬದುಕಲು!

ದೀಪಾ ವಿ ಮಹಾಲೆ, ಹಳಿಯಾಳ
ಅರಳಿ ಕಟ್ಟೆಯಲ್ಲಿ ಅರಳಿದ ಪ್ರೇಮವು ಪಂಚಾಯ್ತಿ ಕಟ್ಟೆಯಲ್ಲಿ ಬಾಡುವುದೇಕೆ?



ಪಂಚರು ಸೇರಿ ಇವರ ಪ್ರೇಮವನ್ನು puncture ಮಾಡಿದ್ದರಿಂದ!

■ ರಾಮ್